ಕಾಮಗಾರಿಯನ್ನು ಜಾಗ್ರತೆ ಪೂರೈಸುವುದಕ್ಕಾಗದೆ ಇರುವುದರಿಂದ ಈ ವರ್ಷವೇ ಅದನ್ನು ಮಂಜೂರು ಮಾಡಿ ಕಾಮಗಾರಿಯನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—Superintending Office ನಲ್ಲಿ Estimate ಪರಿಶೀಲನೆ ಮಾಡುತ್ತಿದ್ದಾರೆ. ಅದು ಬಂದನಂತರ ತಮ್ಮ ನಲಹೆಯನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾರೆ.

Establishment Clerk, Revenue Commissioner's Office (Complaints against).

Q.—762. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state :—

(*a*) the name of the Establishment Clerk in the Office of the Revenue Commissioner and since how long he is working ;

(*b*) whether there are any complaints against this official ?

A.—Sri Kadidal MANJAPPA (Minister for Revenue and Public Works).—

(*a*) There are four officials working in the Establishment Section of the Revenue Commissioner's Office.

Their names are—

1 Sri C. Narasimhamurthy
2 ,, R. L. Narasimha Setty
3 ,, H. K. Chikkahanumanthaiah
4 ,, M. Nanjundaiah

(*b*) None.

ಶ್ರೀ ಜಿ. ಪುಟ್ಟಸ್ವಾಮಿ.—ಈ ನೌಕರರು ಎಷ್ಟು ಕಾಲದಿಂದ ಸದರಿ ಆಫೀಸಿನಲ್ಲಿ ಕೆಲಸಮಾಡುತ್ತಿದ್ದಾರೆಂಬುದನ್ನು ತಿಳಿಸುತ್ತೀರಾ ?

Sri Kadidal MANJAPPA.—I request the Hon'ble Speaker to take up this question some time later because I had not noticed that the Revenue Commissioner had not furnished the answer for this point.

Mr. SPEAKER.—It will be taken up on some other day ; say on Monday.

Bridge on Varada River near Anavatti (Construction).

Q.—876. Sri MALLIKARJUNAPPA GOWDA (Sorab-Shikaripur).—

Will the Government be pleased to state :—

(*a*) since when the Governments of Mysore and Bombay have been considering the question of the construction of a bridge to the Varada River near Anavatti-Hanagal Road, Sorab Taluk ;

(*b*) the places inspected in this behalf ;

(*c*) the amount of estimates in the several places ;

(*d*) when they propose to construct this bridge ?

A.—Sri Kadidal MANJAPPA (Minister for Revenue and Public Works).—

(*a*) Since October 1946.

(*b*) One site near Gondi on Anavatti-Hanagal Road.

(*c*) Rs. 16·5 lakhs for a bridge near Gondi.

(*d*) The Government of Bombay have proposed an alternative site near Mavinahole and this will have to be investigated. The work will be taken up as soon as the site for the bridge is fixed and the estimate receives sanction.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಈ ಸೇತುವೆ ಬಹಳ ಪ್ರಾಮುಖ್ಯವಾದುದೆಂದು ಭಾವಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಬಹಳ ಪ್ರಾಮುಖ್ಯವಾದುದು. ಈ ಸೇತುವೆಗೆ ತಗಲಬಹುದಾದ ಖರ್ಚಿನಲ್ಲಿ ಅರ್ಧಭಾಗವನ್ನು ಬೊಂಬಾಯಿ ಸರ್ಕಾರದವರು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ನಮ್ಮ ಸರ್ಕಾರದವರು 16·5 ಲಕ್ಷಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿ ಬೊಂಬಾಯಿ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಬೊಂಬಾಯಿ ಸರ್ಕಾರದವರು ಬೇರೆ ಒಂದು ಸೈಟನ್ನು ಸೂಚಿಸಿದ್ದಾರೆ. ಪುನಃ ಅವರಿಗೆ ಈ ವಿಚಾರಕ್ಕೆ ಸಂಬಂಧಪಟ್ಟ ರಿಕಾರ್ಡನ್ನು ಕಳುಹಿಸಿ ಕೊಡಲಾಗಿದೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ತಾವೇ ನೋ ಸೈಟ್ select ಮಾಡಬೇಕು ಎಂದು ಹೇಳಿದ್ದೀರಿ. ಅವರು ಅದನ್ನು ಒಪ್ಪಿಕೊಂಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವನ್ನು ಇಬ್ಬರೂ investigate ಮಾಡುವುದಕ್ಕೋಸ್ಕರ ಅವರನ್ನು ಕೇಳಿಕೊಂಡಿದ್ದೇವೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಆ ಸೈಟನ್ನು ತಾವೂ ಆ ಸರ್ಕಾರದವರೂ ಸೇರಿ joint inspection ಮಾಡಿ ಒಂದು ನಿರ್ಧಾರಕ್ಕೆ ಬರುವುದು ಒಳ್ಳೆಯದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಇಂಜಿನಿಯರುಗಳು ಮತ್ತು ಅವರ ಕಡೆಯ ಇಂಜಿನಿಯರುಗಳು ಸೇರಿ joint inspection ಮಾಡುತ್ತಾರೆ. ಸೇತುವೆಯನ್ನು ಕಟ್ಟಲು ಮಾವಿನ ಹೊಳೆ ಹತ್ತಿರ ಸರಿಯಾದ ಸೈಟು ಇದೆಯೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.